# **ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ವಿರಾಜಪೇಟೆ**

## **ಸಿ.ಸಿ. ಸಂಖ್ಯೆ:310/2023**

**ಪಿರ್ಯಾದಿ** : ಜ್ಞಾನಾನಂದ.ಎಂ.ಎಸ್,
ವಯಸ್ಸು ಸುಮಾರು 47 ವರ್ಷ,
ಬಿನ್: ಎಂ.ಬಿ. ಷಣ್ಮುಖ,
ವ್ಯವಸ್ಥಾಪಕರು,
ಕೆ.ಜೆಡ್.ವಿ.ವಿ.ಎಸ್, ಸಂಘ ಎನ್,
ಮಡಿಕೇರಿ.
ಸಿದ್ದಾಪುರ ಶಾಖೆ, ವಿರಾಜಪೇಟೆ ತಾಲ್ಲೂಕು.

**ವಿರುದ್ಧ**

**ಆರೋಪಿ** : ಶ್ರೀ ಮಣಿ.ಟಿ.ವಿ,
ವಯಸ್ಸು ಸುಮಾರು 40 ವರ್ಷ,
ಬಿನ್:ವೇಲಸ್ವಾಮಿ,
ವಾಸ: ಕರಡಿಗೋಡು ಗ್ರಾಮ ಮತ್ತು ಅಂಚೆ,
ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.
ಸಿದ್ದಾಪುರ, ವಿರಾಜಪೇಟೆ ತಾಲ್ಲೂಕು.

## **ಆಪಾದನೆಯ ಸಾರಾಂಶ**

ಶ್ರೀ ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ವಿರಾಜಪೇಟೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ:-

ಆರೋಪಿಯಾದ ನೀವು ವ್ಯವಹಾರದ ಉದ್ದೇಶಕ್ಕಾಗಿ ಪಿರ್ಯಾದುದಾರರ ಸಂಘದವನ್ನು ಸಂಪರ್ಕಿಸಿ, ಅವರಿಂದ ದಿನಾಂಕ 23.12.2013 ರಂದು 50,000/- ರೂಪಾಯಿಗಳನ್ನು ಪಿಗ್ಮಿ ಓವರ್ ಡ್ರಾಫ್ಟ್ ಯೋಜನೆಯಡಿಯಲ್ಲಿ ಸಾಲವಾಗಿ ಪಡೆದಿದ್ದು, ಸದರಿ ಹಣವನ್ನು ಬಡ್ಡಿ ಸಮೇತ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿರಾಜಪೇಟೆ ಶಾಖೆಯ ಚೆಕ್ ಸಂಖ್ಯೆ: 531459, ದಿನಾಂಕ 15.12.2022, ರೂ.1,50,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಬ್ಯಾಂಕ್ ಆಫ್ ಬರೋಡಾ, ಸಿದ್ದಾಪುರ ಶಾಖೆಯಲ್ಲಿ ದಿನಾಂಕ 15.12.2022 ರಂದು ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds

Insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 07.01.2023 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು **ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ ಅರ್ಥವಾಯಿತು.

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ ತಪ್ಪು ಮಾಡಿಲ್ಲ. ವಿಚಾರಣೆಯಾಗಬೇಕು.

***(**ದಿನಾಂಕ 24.06.2026 ರಂದು ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ***,** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು***.** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ***)***

ಸಹಿ**/-**

ವಿರಾಜಪೇಟೆ
ದಿನಾಂಕಃ 24.06.2026

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ವಿರಾಜಪೇಟೆ.